ಶ್ರೀ ಶಿವಾನಂದ ಹೆಚ್. ಕೌಜಲಗಿ : ಈಗಾಗಲೇ ಆದ್ಯತೆ ಮೇಲೆ ಕೊಡಗಿನ ಎಲ್ಲಾ ರಸ್ತೆಗಳನ್ನು ದುರಸ್ತಿ ಮಾಡಲಿಕ್ಕೆ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಈ ಮೇಲಿನ ರಸ್ತೆ ದುರಸ್ತಿ ಕಾರ್ಯದಲ್ಲಿ ವಿಶೇಷ ಆದ್ಯತೆ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

(ಉತ್ತರಗಳನ್ನು ಲಗತ್ತಿಸಲಾಗಿದೆ)

ವಿಜಾಪುರ ಜಿಲ್ಲೆಯಲ್ಲಿ ಹೊಸ ಪಶುವೈದ್ಯಕೀಯ ಆಸ್ಪತ್ರೆಗಳು

851 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿರುವ ಪಶು ವೈದ್ಯಕೀಯ ಆಸ್ಪತ್ರೆಗಳೆಷ್ಟು?

ಆ) ಜಿಲ್ಲೆಯಲ್ಲಿ ಬೇಡಿಕೆ ಇರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಇ) ಹೊಸ ಪಶುವೈದ್ಯಕೀಯ ಆಸ್ಪತ್ರೆಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) 175

ಆ) 12

ಇ) ಬಿಜಾಪುರ ಜಿಲ್ಲೆಯಲ್ಲಿ ಹಿಂದೆ ಜಿಲ್ಲಾ ಪಂಚಾಯತ್‌ನಿಂದ ಪ್ರಾರಂಭಿಸಲ್ಪಟ್ಟಿರುವ 20 ಪಶುಚಿಕಿತ್ಸಾ ಕೇಂದ್ರಗಳನ್ನು 1995-96ನೇ ಸಾಲಿನಲ್ಲಿ ಸಕ್ರಮಗೊಳಿಸಲು ನಿರ್ಧರಿಸಿದೆ. ಇದನ್ನು ಬಿಟ್ಟು ಹೊಸ ಆಸ್ಪತ್ರೆಗಳನ್ನು ಸರ್ಕಾರವು ಪ್ರಾರಂಭಿಸುವುದು ಪರಿಶೀಲಿಸಲಾಗುವುದು.

ಶ್ರೀ ಬಸವನಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಜಿಲ್ಲೆಯಲ್ಲಿ ಬೇಡಿಕೆಯಿರುವಂಥ ಆಸ್ಪತ್ರೆಗಳ ಸಂಖ್ಯೆ 12 ಎಂದು ಹೇಳಿದ್ದಾರೆ. ಆದರೆ ಅವು ಯಾವುವು ಎಂಬುದನ್ನು ದಯವಿಟ್ಟು ತಿಳಿಸಬೇಕು. ಅದೇ ರೀತಿ ಪಶುವೈದ್ಯಕೀಯ ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ ಎಂದರೆ, ರೈತರು ತಮ್ಮ ದನಕರುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ.....

ಅಧ್ಯಕ್ಷರು : ಹೊಸ ಆಸ್ಪತ್ರೆಗಳು ನಿಮ್ಮ ಕ್ಷೇತ್ರದಲ್ಲಿ ಬೇಕಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಬಿಜಾಪುರ ಜಿಲ್ಲೆಯಲ್ಲಿ ಈಗ ಒಟ್ಟು 175 ಆಸ್ಪತ್ರೆಗಳು, ಜಾನುವಾರು ಚಿಕಿತ್ಸಾ ಕೇಂದ್ರಗಳು ಕೆಲಸ ಮಾಡುತ್ತಿವೆ. ಅಲ್ಲಿ ಒಟ್ಟು ಬೇಡಿಕೆ ಇರತಕ್ಕಂಥದ್ದು 188. ಜಿಲ್ಲಾ ಜಾನುವಾರು ಗಣತಿ ಪ್ರಕಾರ 187 ಪಶು ಚಿಕಿತ್ಸಾ ಕೇಂದ್ರಗಳು ಬೇಕು ಎಂದು ಹೇಳಿದ್ದಾರೆ. ಈಗ ಮೊನ್ನೆ ನಮ್ಮ ಆಯವ್ಯಯ ಪತ್ರದಲ್ಲಿ 1982-83 ರಿಂದ ಮಂಜೂರು ಆಗದೇ ಇದ್ದಂಥ ಸುಮಾರು 310 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ನಾವು ಮಂಜೂರು ಮಾಡಿದ್ದೇವೆ. ಅದರ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ 175 ಮತ್ತು 20 ಒಟ್ಟು 195 ಆಸ್ಪತ್ರೆಗಳು ಆಗುತ್ತವೆ. ಈ ಅಂಕಿ ಸಂಖ್ಯೆಗಳು ಬೇಕು ಎಂದರೆ ಆ ಜಿಲ್ಲೆಯ ಅಂಕಿ ಸಂಖ್ಯೆಗಳು ನನ್ನ ಹತ್ತಿರ ಇದೆ. ಅದನ್ನು ಓದಿ ಎಂದರೆ ಓದುತ್ತೇನೆ. ಮತ್ತೆ ಈಗ ನಮ್ಮ ಕರ್ನಾಟಕದಲ್ಲಿ 3174 ಇನ್ಸ್‌ಟ್ಯೂಷನ್ಸ್‌ಗಳಿವೆ. ಅಂದರೆ ಇದು 27 ಸಾವಿರ ಹಳ್ಳಿಗಳಿಗೆ ಸಂಬಂಧಪಟ್ಟ ಅಂಕಿ ಸಂಖ್ಯೆ ಅಂದರೆ 5 ಸಾವಿರ ಕ್ಯಾಟಲ್ ಪ್ಯಾಪುಲೇಷನ್‌ಗೆ ಒಂದು ಪಶು ಚಿಕಿತ್ಸಾಲಯ. ಆ ಪ್ರಕಾರವಾಗಿ We have reached saturation. ನಮ್ಮ ನಾಗೇಗೌಡರು ಸಂಪೂರ್ಣವಾಗಿ ಕೊಟ್ಟುಬಿಟ್ಟಿದ್ದಾರೆ. ಹಿಂದೆ ಇದ್ದಂಥ ಸಚಿವರು ಎಲ್ಲದಕ್ಕೂ ಕೊಟ್ಟಿದ್ದಾರೆ. ಕೆಲವು ಕಡೆ ಹೆಚ್ಚು ಕೊಟ್ಟಿದ್ದಾರೆ, ಕೆಲವು ಕಡೆ ಬೇಡಿಕೆ ಇದೆ. ಈಗ ಹೊಸದಾಗಿ

ಬಂದಿರತಕ್ಕ ಅನೇಕ ಮಾನ್ಯ ಸದಸ್ಯರು ಬಹಳಷ್ಟು ಬೇಡಿಕೆಗಳನ್ನು ಇಟ್ಟಿದ್ದಾರೆ. ಅದನ್ನು ಪರಿಶೀಲನೆ ಮಾಡಿ ಕೆಲವು ಇನ್ಸ್ಟ್ರೂಷನ್‌ಗಳನ್ನು ಮೇಲ್ದರ್ಜೆಗೆ ಏರಿಸಬೇಕಾಗುತ್ತದೆ. ಕೆಲವು ಕಡೆ ಹೊಸದಾಗಿ ಕೊಡಬೇಕಾಗುತ್ತದೆ. ನನ್ನ ಒಂದು ಆಶಯ ಎಂದರೆ, ಈಗಿರತಕ್ಕಂಥ ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸುವ ಕಾರ್ಯ, ಉಪಕರಣಗಳನ್ನು ಕೊಡುವಂಥದ್ದು, ಅದನ್ನು ಹೆಚ್ಚು ಒತ್ತು ಕೊಟ್ಟು ಮಾಡೋಣ ಎನ್ನುವುದು ಆಗಿದೆ. ಆದರೆ ಅವರು ಈಗ ಕೇಳಿರತಕ್ಕಂಥದ್ದನ್ನು ಪರಿಶೀಲಿಸಬೇಕಾಗುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ : ಅಧ್ಯಕ್ಷರೇ, ಹೋದ ವರ್ಷ 195 ಆಸ್ಪತ್ರೆಗಳನ್ನು ಏನು ಮಂಜೂರು ಮಾಡಿದ್ದಾರೆ. ಆ ಆಸ್ಪತ್ರೆಗಳಿಗೆ ನಿಜವಾಗಿಯೂ ಔಷಧಿಗಳ ಸರಬರಾಜಾಗಲೀ, ಮತ್ತೆ ಈ ಆಸ್ಪತ್ರೆಗಳಿಗೆ ಸಿಬ್ಬಂದಿಯನ್ನು ಕೂಡ ಇದುವರೆಗೆ ತಾವು ಒದಗಿಸಿಲ್ಲ. ಅದು ಬಹಳ ತೊಂದರೆಯಾಗಿದೆ. ಬಹುಶಃ ಆದಷ್ಟು ಎಲ್ಲಾ ತೊಂದರೆಗಳನ್ನು ನಿವಾರಿಸಿದರೆ ತಾವು ಕೊಟ್ಟಿರತಕ್ಕಂಥ ಮತ್ತು ನಾಗೇಗೌಡರವರು ಕೊಟ್ಟಿರತಕ್ಕಂಥ ಆಸ್ಪತ್ರೆಗಳು ಸಾರ್ಥಕವಾಗುತ್ತದೆ. ಮತ್ತೆ ಇನ್ನೊಂದು ಮುಖ್ಯವಾದ ವಿಚಾರವೆಂದರೆ ಪ್ರತಿವರ್ಷ ಕೂಡ ಕುರಿಗಳು ಒಂದಲ್ಲ ಒಂದು ರೋಗದಿಂದ ತೊಳಲಾಡುತ್ತವೆ. ಈ ದನಕರುಗಳಿಗಂತೂ ಒಂದಲ್ಲ ಒಂದು ರೋಗ ಬಂದೇ ಬರುತ್ತದೆ. ಈ ಮುಂಜಾಗ್ರತಾ ಕ್ರಮವಾಗಿ ಪ್ರತಿಯೊಂದು ದವಾಖಾನೆಯ ಮುಖಾಂತರ ಔಷಧಿಗಳನ್ನು ವಿತರಣೆ ಮಾಡತಕ್ಕಂಥ ವ್ಯವಸ್ಥೆಯನ್ನು ಏನಾದರೂ ಮಾಡಿದ್ದೀರಾ?

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ಈ ಔಷಧಿಗಳ ಖರೀದಿಯಲ್ಲಿ ಸ್ವಲ್ಪ ತಡವಾಗಿದೆ. ಅದು ನಿಜ. ಆ ಬಗ್ಗೆ ಕಾಲ್ ಅಟೆಷ್ನ್‌ನಲ್ಲಿ ಸವಿಸ್ತಾರವಾಗಿ ಸದನಕ್ಕೆ ತಿಳಿಸುತ್ತೇನೆ. ಈ ಜಂತು ನಾಶಕಗಳನ್ನು ಕುರಿಗಳಿಗೆ 4 ಸಾರಿ ಲಸಿಕೆಗಳ ಮುಖಾಂತರ ಕೊಡಬೇಕು. ಅದನ್ನು ಈಗ ವ್ಯವಸ್ಥೆ ಮಾಡಿದ್ದೇವೆ. ಆದಷ್ಟು ಬಳ್ಳಾರಿ, ಬಿಜಾಪುರ, ಧಾರವಾಡ ಮತ್ತು ಬೆಳಗಾಂ, ಈ ಕಡೆಗಳಲ್ಲಿ ಕುರಿಗಳಿಗೆ ಏನು ಕಾಯಿಲೆ ಬಂದಿದೆ ಅವಕ್ಕೆ ವ್ಯಾಕ್ಸಿನೇಷನ್ ಕೊಡುವ ಕಾರ್ಯವನ್ನು ಮಾಡಿದ್ದೇವೆ. ಈಗ ಔಷಧಿಗಳ ಸರಬರಾಜು ಆಗಿದೆ. ಈಗ ಏನೂ ಔಷಧಿಗಳ ಕೊರತೆಯಿಲ್ಲ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ಇವ್ಹೊತ್ತು ಇವರು ಏನು ಆಸ್ಪತ್ರೆಗಳನ್ನು ಪ್ರಾರಂಭ ಮಾಡಿದ್ದಾರೆ, ಅಲ್ಲಿ ಬಹುತೇಕ ಆಸ್ಪತ್ರೆಗಳಲ್ಲಿ ಪಶು ವೈದ್ಯರು ಮಾತ್ರ ಇದ್ದಾರೆ. ಆದರೆ ಕಾಂಪೌಂಡರುಗಳಾಗಲೀ, ಬೇರೆ ಸಿಬ್ಬಂದಿಯವರಾಗಲೀ ಇಲ್ಲ. ಡಿ.ಪಿ.ಎ.ಪಿ. ಯವರು ಮತ್ತು ಬೇರೆ ಕಡೆಯವರು ಏನು ವಾಹನಗಳನ್ನು ವಹಿಸಿಕೊಟ್ಟಿದ್ದಾರೆ ಅವಕ್ಕೆ ಡ್ರೈವರ್‌ಗಳಿಲ್ಲ, ಸಿಪಾಯಿಗಳಿಲ್ಲ, ಹೀಗೆ ಬಹಳಷ್ಟು ಹುದ್ದೆಗಳು - ಖಾಲಿಯಿವೆ. ಇದನ್ನು ಪರಿಶೀಲನೆ ಮಾಡುವಾಗ ಅವರನ್ನು ಕೇಳಿದರೆ ನೇರವಾಗಿ ಬೆಂಗಳೂರಿನ ಕಡೆ ಮಂತ್ರಿಗಳ ಕಡೆ ಬೆಟ್ಟು ಮಾಡಿ ತೋರಿಸುತ್ತಾರೆ. ಅದು ಆಗಿಲ್ಲ, ಇದು ಆಗಿಲ್ಲ, ಇದು ಮಾಡಲಿಕ್ಕೆ ಆಗುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದ್ದರಿಂದ ಈ ಹುದ್ದೆಗಳನ್ನೆಲ್ಲಾ ತುಂಬಿ ಸರಿಪಡಿಸುತ್ತೀರಾ?

ಶ್ರೀ ಬಿ.ಎನ್. ಬಚ್ಚೇಗೌಡ : ಇಲಾಖೆಯಲ್ಲಿ 1118 'ಡಿ' ದರ್ಜೆ ನೌಕರರ ಹುದ್ದೆಗಳು ಖಾಲಿ ಇವೆ. ಹೊಸದಾಗಿ ಮೀಸಲಾತಿ ಬಂದದ್ದರಿಂದ ಅವನ್ನು ತುಂಬಲು ಸ್ವಲ್ಪ ತಡವಾಗಿದೆ. ಪಶುವೈದ್ಯ ಡಾಕ್ಟರುಗಳು ಸುಮಾರು 130 ಜನ ಬೇಕಾಗಿದ್ದಾರೆ. ಈಗ ಡಾಕ್ಟರುಗಳು ಯುನಿವರ್ಸಿಟಿಯಿಂದ ಪಾಸಾಗಿ ಬರುವುದಕ್ಕೂ ಅವರನ್ನು ನೇಮಕ ಮಾಡಿಕೊಳ್ಳುವುದಕ್ಕೂ ಸರಿಯಾಗುತ್ತದೆ. ಇದೊಂದು ಇಲಾಖೆಯಲ್ಲಿ ಆ ರೀತಿ ಇದೆ. ಈ ಇಲಾಖೆ ಡಾಕ್ಟರುಗಳು ಕೊರತೆ ಇರತಕ್ಕಂಥ ಇಲಾಖೆ. ಅವರು ಬಂದಾದ ಕೂಡಲೇ ಡಾಕ್ಟರುಗಳನ್ನು ನೇಮಕ ಮಾಡುವುದಕ್ಕೆ ಆಗುತ್ತದೆ. ಈಗ 318 ಡಾಕ್ಟರುಗಳು

ಈಗಾಗಲೇ ಆರಾರು ತಿಂಗಳು ಅವಧಿಯಲ್ಲಿ ಟೆಂಪರರಿ ಆಗಿ ಕನ್ಸಾಲಿಡೇಟ್ ಪೇನಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರನ್ನು ಕೆ.ಪಿ.ಎಸ್.ಸಿ: ಮೂಲಕ ಖಾಯಂಗೊಳಿಸಬೇಕಾಗುತ್ತದೆ. ಅವರ ಬೇಡಿಕೆ ಬಗ್ಗೆ ಪರಿಶೀಲನೆ ಮಾಡಿ ಆದಷ್ಟು ಬೇಗ 'ಡಿ' ದರ್ಜೆ ನೌಕರರು ಮತ್ತು ಜೀಪ್ ಡ್ರೈವರ್‌ಗಳನ್ನು ನೇಮಕ ಮಾಡಲಾಗುವುದು.

ಶ್ರೀ ಬಿ.ಆರ್. ಯಾವಗಲ್ : ವಾಹನಗಳಿವೆ, ಚೀಪ್‌ಗಳಿವೆ ನಡೆಸುವುದಕ್ಕೆ ಡ್ರೈವರ್‌ಗಳಿಲ್ಲ. ಎಲ್ಲಾದರೂ ರೋಗ ಕಾಣಿಸಿಕೊಂಡರೆ, ಹಳ್ಳಿಗಳಿಗೆ ಹೋಗಿ ದನಗಳನ್ನು ತಪಾಸಣೆ ಮಾಡಬೇಕೆಂದರೆ ಡ್ರೈವರ್‌ಗಳಿಲ್ಲದೆ ವಾಹನಗಳು ನಿಂತಿರುತ್ತವೆ. ತಾವು ಅದಕ್ಕೆ ತುರ್ತು ಏನಾದರೂ ಮಾಡಬೇಕು. ಇಲ್ಲದೆ ಹೋದರೆ ತುಂಬ ಕಷ್ಟವಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಈಗಾಗಲೇ ಮಾನ್ಯ ಬಚ್ಚೇಗೌಡರು ಹೇಳಿದ ಹಾಗೆ, ಜಿಲ್ಲಾ ಪರಿಷತ್ತಿನಿಂದ ನಡೆಸುತ್ತಿರತಕ್ಕಂಥ ಸುಮಾರು 310 ಪಶುವೈದ್ಯ ಆಸ್ಪತ್ರೆಗಳನ್ನು ತಾವು ಖಾಯಂಗೊಳಿಸುತ್ತೇವೆಂದು ಈ ಬಜೆಟ್‌ನಲ್ಲಿ ಈಗಾಗಲೇ ಹೇಳಿದ್ದೀರಿ. ಆದರೆ ಕೆಲವು ಕಡೆ ಏನಾಗಿದೆ ಎಂದರೆ, ಐದು ಸಾವಿರ ದನಗಳಿಗೆ ಒಂದು ಆಸ್ಪತ್ರೆ ಇರಬೇಕು ಎನ್ನತಕ್ಕಂತಹ ನಾರಮ್ಸ್ ಇದೆ. ಅದು ಕೆಲವು ಕಡೆ ಹತ್ತು ಸಾವಿರ ಕೆಲವು ಕಡೆ ಎರಡು ಸಾವಿರ ಮತ್ತ ಕೆಲವುಕಡೆ ಒಂದು ಸಾವಿರ ಇದೆ. ನೀವು ಕ್ರಮಬದ್ಧವಾಗಿ ಬ್ಲಾಕ್‌ವೈಸ್ ಮಾಡಿದ್ದರೆ ಯಾವ ತೊಂದರೆ ಕೂಡ ಇರುತ್ತಿರಲಿಲ್ಲ. ಕೆಲವು ತಾಲ್ಲೂಕುಗಳಲ್ಲಿ ಹೆಚ್ಚಿನ ಆಸ್ಪತ್ರೆಗಳಿಗೆ, ಕೆಲವು ತಾಲ್ಲೂಕುಗಳಲ್ಲಿ ನಿಮ್ಮ ನಾರಮ್ಸ್‌ಗಿಂತಲೂ ಹೆಚ್ಚಿನ ದನಗಳ ಸಂಖ್ಯೆ ಬರುತ್ತದೆ. ಯಾರನ್ನು ಕೇಳದೇ ಐದು ಸಾವಿರ ದನಗಳಿರತಕ್ಕಂತಹ ಪ್ರದೇಶದಲ್ಲಿ ಒಂದು ಆಸ್ಪತ್ರೆಯನ್ನು ಕಡ್ಡಾಯವಾಗಿ ಮಾಡುವಂತಹ ಒಂದು ನಾರಮ್ಸ್ ಮಾಡಬೇಕು.

ಅಧ್ಯಕ್ಷರು : ಈಗ ಉತ್ತರವನ್ನು ನಾಗೇಗೌಡರು ಹೇಳಬೇಕೇ ಅಥವಾ ಬಚ್ಚೇಗೌಡರು ಹೇಳಬೇಕೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾಗೇಗೌಡರನ್ನು ಕೂಡ ಹೇಳಲಾಯಿತು. ನಾಗೇಗೌಡರು ಇದ್ದಾಗಲೂ ಕೂಡ ಮಾಡಿದ್ದಾರೆ, ಅವರ ಹಿಂದಿನವರು ಇದ್ದಾಗಲೂ ಕೂಡ ಮಾಡಿದ್ದಾರೆ. ಎಲ್ಲಿಗೆ ಆಸ್ಪತ್ರೆ ಬೇಕಾಗುತ್ತದೆಯೋ ಅಲ್ಲಿಗೆ ವೈದ್ಯರ ಹುದ್ದೆಯನ್ನೇ ಶಿಫ್ಟ್ ಮಾಡುತ್ತಾರೆ, ಅಲ್ಲಿ ಹಾಗೆ ವೆಕೆಂಟ್ ಇಟ್ಟುಬಿಡುತ್ತಾರೆ. ನಂತರ ಆಸ್ಪತ್ರೆಯನ್ನು ಶಿಫ್ಟ್ ಮಾಡುವುದು. ಇದೇ ರೀತಿ ನಮ್ಮ ಕ್ಷೇತ್ರದಲ್ಲಿ ನಾಲ್ಕು ಆಸ್ಪತ್ರೆಗಳನ್ನು ಅವರು ಶಿಫ್ಟ್ ಮಾಡಿದರು. ನಾನು ನಾಗೇಗೌಡರನ್ನು ಕೇಳಿಕೊಂಡು ಸಾಕಾಯಿತು. ಕೊನೆಗೆ ಬಹುಶಃ ಅವರ ಪ್ರಭಾವ ಹೆಚ್ಚಿನ ಆಸ್ಪತ್ರೆಯನ್ನು ತೆರೆಯುವುದಕ್ಕೆ ಆಯಿತೇ ಹೊರತು ಇದ್ದುದ್ದನ್ನು ಉಳಿಸಿಕೊಂಡು ಹೋಗುವುದಕ್ಕಾಗಲಿಲ್ಲ.

ಶ್ರೀ ಕೆ.ಎನ್. ನಾಗೇಗೌಡರು : ಮಾನ್ಯ ಧರ್ಮಸಿಂಗ್ ಹಾಗೂ ಖರ್ಗೆಯವರಿಗೆ ಎಷ್ಟು ಆಸೆಯೆಂದರೆ, ಅಸಾಧ್ಯವಾದ ಆಸೆ.

ಅಧ್ಯಕ್ಷರು : ಅವರು ಒಂದು ಆಸ್ಪತ್ರೆ ಕೊಡಲಿಲ್ಲವೆಂದು ಮಾತ್ರಕ್ಕೆ ಅವರನ್ನು ನೀವು ಪಾರ್ಟಿಯಿಂದಲೇ ಕಳುಹಿಸಿಬಿಟ್ಟಿರಲ್ಲಾ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ನಾನು ಕಳುಹಿಸಲಿಲ್ಲ. ನಾನು ಅವರ ಪರವಾಗಿಯೇ ಎಷ್ಟೋ ಹೋರಾಟ ಮಾಡಿದೆ. ಅವರಾಗಿಯೇ ಹೋದರೆ ನಾನೇನು ಮಾಡಲಿ? ನಾನು ಹೇಳುವುದೇನೆಂದರೆ, ಯಾರು ಕೇಳಲಿ ಬಿಡಲಿ ನಿಮ್ಮ ನಾರಮ್ಸ್ ಪ್ರಕಾರ ಐದು ಸಾವಿರ ದನಗಳ - ಸಂಖ್ಯೆ ಎಲ್ಲಿದೆ, ಅಲ್ಲಿಗೆ ನೇರವಾಗಿ ಆಸ್ಪತ್ರೆಗಳನ್ನು ಮಂಜೂರು ಮಾಡಿ ಮತ್ತು ಅದನ್ನು ಸಂದರ್ಭಾನುಸಾರ ರೀ

ಅಡ್ಜೆಸ್ಟ್‌ಮೆಂಟ್ ಮಾಡಿದರೆ ಒಳ್ಳೆಯದಾಗುತ್ತದೆ. ನೀವು ಎಲ್ಲಿಂದ ಪೋಸ್ಟ್ ಶಿಫ್ಟ್ ಮಾಡುತ್ತೀರಿ ಮತ್ತೆ ಅದನ್ನು ಮಾಪಸ್ ಕೊಡತಕ್ಕಂಥದ್ದನ್ನು ಏಕೆ ಮಾಡುತ್ತೀರಿ?

ಶ್ರೀ ಬಿ.ಎನ್. ಬಚ್ಚೇಗೌಡ : ಕೆಲವು ಕಡೆ ಮಾನ್ಯ ಖಿರ್ಗೆಯವರು ತಿಳಿಸಿದ ಹಾಗೆ ರಾಜಕೀಯ ಒತ್ತಡಗಳಿಂದ ಇವೆಲ್ಲಾ ನಡೆದಿರತಕ್ಕಂಥದ್ದು ನಿಜ. ನಮ್ಮ ನಾಗೇಗೌಡರವರ ಜಿಲ್ಲೆಗೆ 167 ಪಶುವೈದ್ಯ ಆಸ್ಪತ್ರೆಗಳನ್ನು ತೆಗೆದುಕೊಂಡಿದ್ದಾರೆ. ಇದು ಮಂಡ್ಯಕ್ಕೆ ಜಾಸ್ತಿ ಇರುವಂತಹದ್ದು. ಆದುದರಿಂದ ಮಾನ್ಯ ಖಿರ್ಗೆಯವರು ತಿಳಿಸಿರುವುದನ್ನು ಪರಿಶೀಲಿಸಿ ಮಾಡುತ್ತೇವೆ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಖಿರ್ಗೆಯವರು ಏನು ಹೇಳಿದ್ದಾರೆ ಅದರ ಆಧಾರದ ಮೇಲೆ ನಾನು ಒಂದು ಸಣ್ಣ ಮಾಹಿತಿಯನ್ನು ಕೊಡುತ್ತೇನೆ. ಐದು ಸಾವಿರ ದನಗಳಿಗೆ ಒಂದು ಪಶುವೈದ್ಯ ಆಸ್ಪತ್ರೆ ಅಥವಾ ಪ್ರೈಮರಿ ಪಶುವೈದ್ಯ ಸಂಸ್ಥೆ ಎಂದು ಏನು ಮಾಡಿದ್ದಾರೆ ಅದರ ಪ್ರಕಾರ ಕರ್ನಾಟಕ ರಾಜ್ಯಕ್ಕೆ ಇನ್ನು ಆರುನೂರು ಆಸ್ಪತ್ರೆಗಳು ಬೇಕು. ನಾನು ಈಗಾಗಲೇ ಮಾನ್ಯ ಬಚ್ಚೇಗೌಡರಿಗೆ ಹೇಳಿದ್ದೇನೆ. ಜಿಲ್ಲಾಪರಿಷತ್ತಿನಲ್ಲಿ ಯಾವ 320 ಪಶುವೈದ್ಯ ಆಸ್ಪತ್ರೆಗಳು ಸ್ಥಾಪನೆಯಾಗಿವೆ ಅವನ್ನು ಕನ್‌ಫರ್ಮ್ ಮಾಡಿಕೊಡಿ ಎಂದು, ಅದು ಬಹಳ ಒಳ್ಳೆಯ ಕೆಲಸ. ಇದರ ಜೊತೆಗೆ 95-96ನೇ ಸಾಲಿಗೆ ಹೊಸದಾಗಿ 200 ಪಶುವೈದ್ಯ ಆಸ್ಪತ್ರೆಗಳನ್ನು ನೀವು ಮಾಡಬೇಕು. 80 ಆಸ್ಪತ್ರೆಗಳನ್ನು ಮೇಲ್ದರ್ಜೆಗೆ ಏರಿಸಬೇಕು. ನಮ್ಮ ಮಂಡ್ಯ ಜಿಲ್ಲೆಗೆ 125 ಕೊಟ್ಟಿರುವುದು ಅಲ್ಲ. ತಾವು ನಮ್ಮ ಉಪಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್‌ರವರ ಜೊತೆ ಮಾತನಾಡಿ, ದಯಮಾಡಿ ಈ ವರ್ಷ ತಾವು ಹೊಸದಾಗಿ 200 ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡುವ ಕೆಲಸ ಮಾಡಿ.

ಮೂಡಲಗಿಯಲ್ಲಿ ವಿದ್ಯುತ್ ವಿತರಣ ಕೇಂದ್ರ

836 - ಶ್ರೀ ವಿ.ಎನ್. ಕೌಜಲಗಿ (ಅರಭಾವಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೋಕಾಕ ತಾಲ್ಲೂಕಿನ ಮೂಡಲಗಿಯಲ್ಲಿ ಮಂಜೂರಾಗಿರುವ 110 ಕೆ.ವಿ. ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯು ಯಾವ ಹಂತದಲ್ಲಿದೆ?

ಆ) ಆ ಭಾಗದ ಜನರಿಗೆ ಉಪಯುಕ್ತರಾಗಿರುವ ಈ ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯನ್ನು ಪೂರ್ಣಗೊಳಿಸಲು ಸರ್ಕಾರಕ್ಕೆ ಎಷ್ಟು ಕಾಲಾವಕಾಶ ಬೇಕಾಗುವುದು.

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) ಗೋಕಾಕ್ ತಾಲ್ಲೂಕಿನ ಮೂಡಲಗಿಯಲ್ಲಿ ಮಂಜೂರಾಗಿರುವ 110 ಕೆ.ವಿ. ವಿದ್ಯುತ್ ಉಪಕೇಂದ್ರದ ಕಾಮಗಾರಿಯು ಪ್ರಗತಿಯಲ್ಲಿದೆ. ನಿರ್ಮಾಣ ಕಾರ್ಯಕ್ಕೆ ಬೇಕಾಗಿರುವ ಎಲ್ಲಾ ವಿದ್ಯುತ್ ಉಪಕರಣಗಳು ಮತ್ತು ಇತರೇ ಸಾಮಗ್ರಿಗಳನ್ನು ಸರಬರಾಜು ಮಾಡಲಾಗಿದ್ದು, ವಿದ್ಯುತ್ ಪ್ರಸರಣಾ ಮಾರ್ಗದ ನಿರ್ಮಾಣ ಕಾರ್ಯಕ್ಕೆ ಬೇಕಾಗಿರುವ ಸಾಮಗ್ರಿಗಳನ್ನು ಒದಗಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಈ ವಿದ್ಯುತ್ ಉಪಕೇಂದ್ರದ ನಿರ್ಮಾಣ ಕಾರ್ಯವನ್ನು ಮಾರ್ಚ್ 1996ರೊಳಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಶ್ರೀ ವಿ.ಎಸ್. ಕೌಜಲಗಿ : ತಾವು ಉತ್ತರದಲ್ಲಿ ವಿದ್ಯುತ್ ಪ್ರಸರಣಾ ಮಾರ್ಗ ನಿರ್ಮಾಣಕ್ಕೆ ಸಾಮಗ್ರಿಗಳನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೆಂದು ಹೇಳಿದ್ದೀರಿ. ಯಾವ ಯಾವ ಸಾಮಗ್ರಿಗಳನ್ನು ಕೊಟ್ಟಿದ್ದೀರಿ ಅಥವಾ ಇನ್ನೂ ಕೂಡ ಬೇಕಾದಂತಹ ಸಾಮಗ್ರಿಗಳಾವುವು?